**ಆರ್.ಜಿ.ಪಿ.ಎಸ್.ಎ/ಆರ್.ಜಿ.ಎಸ್.ಎ ಯೋಜನೆಯ 2014-15ನೇ ಸಾಲಿನ ಕ್ರಿಯಾ ಯೋಜನೆಯಡಿ ಅನುಮೋದನೆಗೊಂಡ ನಾವಿನ್ಯತಾ ಚಟುವಟಿಕೆಯಾದ ಗ್ರಾಮ ಪಂಚಾಯತಿಗಳ ಸಂಘಟನಾತ್ಮಕ ಅಭಿವೃದ್ಧಿ(ಜಿ.ಪಿ.ಓ.ಡಿ) ಕಾರ್ಯಕ್ರಮವನ್ನು ಮುಂದಿನ 6 ತಿಂಗಳ ಅವಧಿಯವರೆಗೆ ಮುಂದುವರೆಸಿರುವುದರ ಕುರಿತು ಚರ್ಚಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 17-05-2017ರಂದು ಅಪರಾಹ್ನ 3.00 ಗಂಟೆಗೆ ನಡೆದ ಸಭೆಯ ನಡವಳಿಗಳು.**

**ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು:**

1. ಶ್ರೀಮತಿ ಡಾ॥ ಎನ್. ನಾಗಾಂಬಿಕಾ ದೇವಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಶ್ರೀ ರಘುನಂದನ್, ನಿವೃತ್ತ ಐ.ಎ.ಎಸ್ ಅಧಿಕಾರಿ, ಸಹ ಸಂಸ್ಥಾಪಕರು, ಆವಂತಿಕ ಫೌಂಡೇಶನ್.
3. ಶ್ರೀ ಕೆ.ಯಾಲಕ್ಕಿಗೌಡ, ನಿರ್ದೇಶಕರು (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಶ್ರೀ ಪ್ರಾಣೇಶ್‌ರಾವ್, ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.
5. ಶ್ರೀ ನಂಜುಂಡರಾವ್, ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ಶ್ರೀ ಜಿ.ಮುನಿಯಪ್ಪ, ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತಿ, ಕೋಲಾರ
7. ಶ್ರೀ ಎಸ್. ಧನಂಜಯ್, ತಾಲ್ಲೂಕು ಯೋಜನಾಧಿಕಾರಿ, ತಾಲ್ಲೂಕು ಪಂಚಾಯತಿ, ಮುಳಬಾಗಿಲು, ಕೋಲಾರ ಜಿಲ್ಲೆ.
8. ಶ್ರೀ ಬಿ.ಜೆ.ರವೀಂದ್ರ, ಬೋಧಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
9. ಶ್ರೀ ಸ್ವರೂಪ್, ಸಹ ಸಂಸ್ಥಾಪಕರು, ಆವಂತಿಕ ಫೌಂಡೇಶನ್, ಬೆಂಗಳೂರು.

ಶ್ರೀ ಕೆ.ಯಾಲಕ್ಕಿಗೌಡ, ನಿರ್ದೇಶಕರು (ಪಂ.ರಾಜ್-2)ಇವರು ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯಡಿಯ ನಾವಿನ್ಯತಾ ಚಟುವಟಿಕೆಗಾಗಿ ರಚಿಸಲಾಗಿರುವ ರಾಜ್ಯ ಮಟ್ಟದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ, ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ, ನಿರ್ಣಯಿಸಲಾಯಿತು.

ಆರ್.ಜಿ.ಪಿ.ಎಸ್.ಎ ಯೋಜನೆಯ 2014-15ನೇ ಸಾಲಿನ ಕ್ರಿಯಾ ಯೋಜನೆಯಡಿ ಅನುಮೋದನೆಗೊಂಡ ನಾವಿನ್ಯತಾ ಚಟುವಟಿಕೆಯಾದ ಗ್ರಾಮ ಪಂಚಾಯತಿಗಳ ಸಂಘಟನಾತ್ಮಕ ಅಭಿವೃದ್ಧಿ(ಜಿ.ಪಿ.ಓ.ಡಿ) ಕಾರ್ಯಕ್ರಮವನ್ನು ಮುಂದಿನ 6 ತಿಂಗಳ ಅವಧಿಯವರೆಗೆ ಮುಂದುವರೆಸಿರುವುದರ ಬಗ್ಗೆ ಭಾರತ ಸರ್ಕಾರದ ಪಂ.ರಾಜ್ ಮಂತ್ರಾಲಯದ ರಾಷ್ಟ್ರೀಯ ಗ್ರಾಮ ಸ್ವರಾಜ್ ಯೋಜನೆಯಡಿಯ ದಿನಾಂಕ:17-04-2017ರಂದು ನಡೆದ 2017-18ನೇ ಸಾಲಿನ 1ನೇ ಕೇಂದ್ರ ಕಾರ್ಯಕಾರಿ ಸಮಿತಿ ಸಭೆಯ ದಿನಾಂಕ:19-04-2017ರ ನಡವಳಿಯಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನು ಸಭೆಯ ಗಮನಕ್ಕೆ ತರಲಾಯಿತು.

ಆವಂತಿಕ ಫೌಂಡೇಶನ್ ಸಹ ಸಂಸ್ಥಾಪಕರಾದ ಶ್ರೀ ರಘುನಂದನ್‌ರವರು ಮಾತನಾಡುತ್ತಾ, ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ ಕೈಗೊಂಡಿರುವ ನಾವಿನ್ಯತಾ ಚಟುವಟಿಕೆಯಾದ ಗ್ರಾಮ ಪಂಚಾಯತಿಗಳ ಸಂಘಟನಾತ್ಮಕ ಅಭಿವೃದ್ಧಿ(ಜಿ.ಪಿ.ಓ.ಡಿ) ಕಾರ್ಯಕ್ರಮದಲ್ಲಿ ಇಲ್ಲಿಯವರೆವಿಗೂ ಕೈಗೊಂಡಿರುವ ಚಟುವಟಿಕೆಗಳ ಸಂಪೂರ್ಣ ವಿವರಗಳನ್ನು ಸಭೆಯ ಗಮನಕ್ಕೆ ತಂದರು. ಅಲ್ಲದೇ ಸದರಿ ಕಾರ್ಯಕ್ರಮದ ಒಟ್ಟು 7 ಹಂತಗಳಲ್ಲಿ ಈಗಾಗಲೇ 5 ಹಂತಗಳನ್ನು ಮುಕ್ತಾಯಗೊಳಿಸಲಾಗಿದ್ದು, ಮುಖ್ಯವಾದ 2 ಹಂತಗಳು ಬಾಕಿ ಉಳಿದಿರುತ್ತವೆ. ಈಗಾಗಲೇ ಮಾಡಿಕೊಳ್ಳಲಾದ ಒಪ್ಪಂದ(MoU)ವು ದಿನಾಂಕ:31-12-2016ರಂದು ಮುಕ್ತಾಯಗೊಂಡಿರುತ್ತದೆ. ಮುಂದುವರೆದು, ದಿನಾಂಕ:31-12-2016ರವರೆಗೆ ಒಪ್ಪಂದ(MoU) ಮುಕ್ತಾಯಗೊಂಡಿದ್ದರೂ ಸಹಿತ ಆವಂತಿಕ ಫೌಂಡೇಶನ್, ಬೆಂಗಳೂರು ಇದರ ಪ್ರತಿನಿಧಿಗಳು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಗ್ರಾಮ ಪಂಚಾಯತಿಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗದವರೊಂದಿಗೆ ಸೌಹಾರ್ದ ನೆಲೆಯಲ್ಲಿ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಬಂದಿರುತ್ತೇವೆಂದು ಸಭೆಗೆ ತಿಳಿಸಿದರು. ಸದ್ಯಕ್ಕೆ ಆವಂತಿಕ ಫೌಂಡೇಶನ್, ಬೆಂಗಳೂರು ಇವರ ಹತ್ತಿರ ಯಾವುದೇ ಜಿ.ಪಿ.ಓ.ಡಿ ನಾವಿನ್ಯತಾ ಚಟುವಟಿಕೆಗಳನ್ನು ಕೈಗೊಳಗೊಳ್ಳಲು ಸಿಬ್ಬಂದಿಗಳ ವೇತನಕ್ಕೆ ಅನುದಾನವು ಲಭ್ಯವಿರುವುದಿಲ್ಲವೆಂದು ಆವಂತಿಕ ಫೌಂಡೇಶನ ಪ್ರತಿನಿಧಿಗಳು ಸಭೆಯ ಗಮನಕ್ಕೆ ತಂದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ರವರು ಮಾತನಾಡುತ್ತಾ, ಆವಂತಿಕ ಫೌಂಡೇಶನ್, ಬೆಂಗಳೂರು ಇವರಿಗೆ ಈ ನಾವಿನ್ಯತಾ ಚಟುವಟಿಕೆಯನ್ನು ಕಾರ್ಯರೂಪಗೊಳಿಸುವಲ್ಲಿ ಯಾವುದಾದರೂ ಸಂಭಾವನೆಗಳು ಪಾವತಿಯಾಗದೇ ಬಾಕಿ ಉಳಿದಿದ್ದರೆ ಅಂತಹ ಬಾಕಿ ಸಂಭಾವನೆಗಳನ್ನು ನಿಯಮಾನುಸಾರ ಪಾವತಿ

ಮಾಡುವಂತೆ ಹಾಗೂ ದಿನಾಂಕ:19-04-2017ರಿಂದ ಅನ್ವಯವಾಗುವಂತೆ ಹೊಸ ಒಪ್ಪಂದ(MoU)ವನ್ನು ಮಾಡಿಕೊಂಡು ನಾವಿನ್ಯತಾ ಚಟುವಟಿಕೆಯನ್ನು ಮುಂದಿನ 6 ತಿಂಗಳ ಅವಧಿಯೊಳಗೆ ಮುಕ್ತಾಯಗೊಳಿಸುವಂತೆ ಕ್ರಮ ವಹಿಸಲು ಸೂಚಿಸಿದರು.

ಈ ಕಾರ್ಯಕ್ರಮದಲ್ಲಿ ಈಗಾಗಲೇ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಮೈಸೂರು ಇವರಿಂದ ಸಿದ್ಧಪಡಿಸಲಾದ ಮಾನವ ಅಭಿವೃದ್ಧಿ ಸೂಚ್ಯಾಂಕದ ಅಂಶಗಳನ್ನು ಉಪಯೋಗಿಸಿಕೊಂಡು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಅಲ್ಲದೇ ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗಳು ಆಯಾ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಹಾಗೂ ಜಿಲ್ಲಾ ಯೋಜನಾ ಸಮಿತಿಗಳಲ್ಲಿ ಅನುಮೋದನೆ ಪಡೆದು ರಾಜ್ಯ ಮಟ್ಟದ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಸಭೆಯ ಅನುಮೋದನೆ ಪಡೆಯುವುದರೊಳಗಾಗಿ ಗ್ರಾಮ ಪಂಚಾಯತಿ ಸಂಘಟನಾತ್ಮಕ ಅಭಿವೃದ್ಧಿ ಕಾರ್ಯಕ್ರಮ (GPOD)ವನ್ನು ಮುಕ್ತಾಯಗೊಳಿಸುವಂತೆ ಸೂಚಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರು ಮಾತನಾಡುತ್ತಾ, ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ರಾಷ್ಟ್ರೀಯ ಗ್ರಾಮ ಸ್ವರಾಜ್ ಯೋಜನೆಯಡಿ 1ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನದಂತೆ ನಿಗಧಿತ ಸಮಯದಲ್ಲಿ ಸದರಿ ನಾವಿನ್ಯತಾ ಚಟುವಟಿಕೆಯನ್ನು ತೀವ್ರಗತಿಯಲ್ಲಿ ಮುಕ್ತಾಯಗೊಳಿಸಲು ಕಾರ್ಯೋನ್ಮುಖರಾಗುವಂತೆ ತಿಳಿಸಿದರು. 2017ರ ಸೆಪ್ಟೆಂಬರ್ ಮಾಹೆಯೊಳಗೆ ನಾವಿನ್ಯತಾ ಚಟುವಟಿಕೆಯ ಫಲಿತಾಂಶದ ಬಗ್ಗೆ ಆವಂತಿಕ ಫೌಂಡೇಶನ್, ಬೆಂಗಳೂರು ಇವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೋಲಾರ ಇವರ ಮೂಲಕ ಸಂಪೂರ್ಣ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿದರು.

ಸದರಿ ನಾವಿನ್ಯತಾ ಚಟುವಟಿಕೆಯಡಿ 2014-15ನೇ ಸಾಲಿನಲ್ಲಿ ರೂ.1.00 ಕೋಟಿ ಹಾಗೂ 2015-16ನೇ ಸಾಲಿನಲ್ಲಿ ರೂ.1.11 ಕೋಟಿಗಳ ಅನುದಾನ ಒಟ್ಟಾರೆ ರೂ.2.11 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ಈ ಅನುದಾನದಲ್ಲಿ ಇಲ್ಲಿಯವರೆವಿಗೂ ಆಕರಣೆಯಾದ ಬಡ್ಡಿ ಮೊತ್ತವನ್ನು ಸಂಬಂಧಿಸಿದ 30 ಗ್ರಾಮ ಪಂಚಾಯತಿಗಳಿಗೆ ಪ್ರೋತ್ಸಾಹಕಧನವಾಗಿ ಸರಿಸಮಾನವಾಗಿ ಹಂಚಿಕೆ ಮಾಡುವುದು ಹಾಗೂ ಗ್ರಾಮ ಪಂಚಾಯತಿಗಳು ಸದರಿ ಪ್ರೋತ್ಸಾಹಕಧನವನ್ನು ನಾವಿನ್ಯತಾ ಚಟುವಟಿಕೆಗೆ ಸಂಬಂಧಪಟ್ಟಂತೆ ನಿಯಮಾನುಸಾರ ವೆಚ್ಚ ಭರಿಸಬಹುದಾಗಿದೆ ಮತ್ತು ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೋಲಾರ ಇವರು ಪರಿಶೀಲಿಸಿ ಅಗತ್ಯ ಕ್ರಮವಹಿಸುವುದು ಎಂದು ತಿಳಿಸಿದರು.

ಆವಂತಿಕ ಫೌಂಡೇಶನ್ ಸಹ ಸಂಸ್ಥಾಪಕರಾದ ಶ್ರೀ ರಘುನಂದನ್ ರವರು ಮಾತನಾಡುತ್ತಾ, ಕೋಲಾರ ಜಿಲ್ಲಾ ಕೇಂದ್ರದಲ್ಲಿ ಅಥವಾ ಮುಳಬಾಗಿಲು ತಾಲ್ಲೂಕು ಕೇಂದ್ರದ ಯಾವುದಾದರೊಂದು ಸ್ಥಳದಲ್ಲಿ ಸದರಿ ನಾವಿನ್ಯತಾ ಚಟುವಟಿಕೆಗೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ಒಂದು ಸೆಮಿನಾರ್‌ನ್ನು ಹಮ್ಮಿಕೊಳ್ಳಲಾಗುವುದೆಂದು ಸಭೆಯ ಗಮನಕ್ಕೆ ತಂದರು. ಈ ಸೆಮಿನಾರ್ ಕಾರ್ಯಕ್ರಮವನ್ನು ಮಾಡಬಹುದೆಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ರವರು ತಿಳಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ರವರು ಕೋಲಾರ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಂಬೋಧಿಸುತ್ತಾ, ಸದರಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ತಳಮಟ್ಟದಲ್ಲಿ ಯಾವ ರೀತಿಯಾಗಿ ಕಾರ್ಯಗತಗೊಳ್ಳುತ್ತಿದೆ ಹಾಗೂ ಈ ನಾವಿನ್ಯತಾ ಚಟುವಟಿಕೆಯ ಫಲಿತಾಂಶದ ಬಗ್ಗೆ ಕೂಲಂಕಷವಾಗಿ ವೀಕ್ಷಿಸಲು ಮತ್ತು ಚರ್ಚಿಸಲು ಸಧ್ಯದಲ್ಲಿಯೇ ಕೋಲಾರ ಜಿಲ್ಲಾ ಪಂಚಾಯತಿ ಹಾಗೂ ಮುಳಬಾಗಿಲು ತಾಲ್ಲೂಕು ಪಂಚಾಯತಿಗೆ ಭೇಟಿ ನೀಡುವುದಾಗಿ ತಿಳಿಸಿದರು.

ಅಂತಿಮವಾಗಿ ನಿರ್ದೇಶಕರು(ಪಂ.ರಾಜ್-2)ರವರು ನಾವಿನ್ಯತಾ ಚಟುವಟಿಕೆಗಾಗಿ ರಚಿಸಲಾಗಿರುವ ರಾಜ್ಯ ಮಟ್ಟದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ವಂದಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಡತ ಸಂಖ್ಯೆ:ಗ್ರಾಅಪ 62 ಜಿಪಸ 2015**

(ಡಾ॥ ಎನ್. ನಾಗಾಂಬಿಕಾ ದೇವಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಶ್ರೀ ರಘುನಂದನ್, ನಿವೃತ್ತ ಐ.ಎ.ಎಸ್ ಅಧಿಕಾರಿ, ಆವಂತಿಕ ಫೌಂಡೇಶನ್, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ/ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತಿ, ಕೋಲಾರ.

3. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
4. ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
5. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮುಳಬಾಗಿಲು, ಕೋಲಾರ ಜಿಲ್ಲೆ.
7. ಶ್ರೀ ರಾಜೇಂದ್ರ ಪ್ರಸಾದ್, ಪ್ರತಿನಿಧಿ, ಆವಂತಿಕ ಫೌಂಡೇಶನ್, ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ನಿರ್ದೇಶಕರು (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.